**ದಿನಾಂಕಃ 07.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಜಿ ಜಿ ಎನ್ ದೂರುದಾರರ ಪರ ವಕೀಲರಿಂದಃ**

ಪಿರ್ಯಾದುದಾರನ ಮನೆಯನ್ನು ಭೋಗ್ಯಕ್ಕೆ ಹಾಕಿಕೊಂಡ ಜಗದೀಶ್ ಎನ್ನುವವರು ನನಗೆ ವೈಯಕ್ತಿಕವಾಗಿ ಪರಿಚಯ ಇಲ್ಲ. ಸುಮನ್ ರಾಘವೇಂದ್ರ ನನ್ನ ಹೆಂಡತಿ. ಜಗದೀಶ್ ರವರ ಖಾತೆಯಿಂದ ನನ್ನ ಹೆಂಡತಿಯ ಖಾತೆಗೆ ಲೀಸ್ ಹಣ 4 ಲಕ್ಷ ರೂ. ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಪಿರ್ಯಾದುದಾರ ಆದಾಯ ತೆರಿಗೆ ಪಾವತಿದಾರನಾಗಿದ್ದು 2006 ರಿಂದ ಇಲ್ಲಿಯವರೆಗೆ ಕೆಲಸ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ಪಿರ್ಯಾದುದಾರ ತನ್ನ ಆದಾಯವನ್ನು declare ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. 2006 ರಲ್ಲಿ ಪಿರ್ಯಾದುದಾರ ಬೆಂಗಳೂರು ನಂದಿನಿ ಡೈರಿ ಮಿಲ್ಕ್, ಬೆಂಗಳೂರಿನಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಿರ್ಯಾದುದಾರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾನೆ ಎಂದರೆ ಸಾಕ್ಷಿ ಸದರಿ ದಾಖಲೆಗಳನ್ನು ನನಗೆ ದೃಡೀಕರಿಸಲು ಆಗುವುದಿಲ್ಲವೆಂದು ಉತ್ತರಿಸಿರುತ್ತಾರೆ. ನನ್ನ ಹೆಂಡತಿ ಸುಮನ್ ರಾಘವೇಂದ್ರ ರವರನ್ನು ನ್ಯಾಯಾಲಯಕ್ಕೆ ಕರೆಸಿ ನನಗೆ ಸಾಕ್ಷಿ ಮಾಡಿಸಲು ಸಾಧ್ಯವಿಲ್ಲ ಕಾರಣ ಈ ಪ್ರಕರಣಕ್ಕೂ ಮತ್ತು ಅವಳಿಗೂ ಯಾವುದೇ ಸಂಬಂಧ ಇಲ್ಲ. ಸಾಕ್ಷಿಗೆ ತನ್ನ ಹೆಂಡತಿ ಸುಮನ್ ರಾಘವೇಂದ್ರ ರವರು ಈ ಪ್ರಕರಣಕ್ಕೆ ಸಂಬಂಧಪಡದೇ ಇದ್ದರೆ ಪಿರ್ಯಾದುದಾರನ ಮನೆಯನ್ನು ಭೋಗ್ಯಕ್ಕೆ ಹಾಕಿಕೊಂಡ ಜಗದೀಶ್ ರವರು ನೀಡಿದ 4 ಲಕ್ಷ ರೂ. ಹಣ ಅವಳ ಖಾತೆಗೆ ಹೇಗೆ ಹೋಯಿತು ಎಂದು ಕೇಳಿದ ಪ್ರಶ್ನೇಗೆ ಸಾಕ್ಷಿ 4 ಲಕ್ಷ ರೂ. ಹಣವನ್ನು ನಾನು ವಿತ್ ಡ್ರಾ ಮಾಡಿ ಪಿರ್ಯಾದಿಗೆ ವಾಪಸು ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಲೀಸ್ ಹಣ 4 ಲಕ್ಷ ರೂ. ತೆರಿಗೆ ವಂಚನೆ ಮಾಡಿರುವ ಹಣ ಆಗಿರುವುದಿಲ್ಲ ಎಂದರೆ ಸಾಕ್ಷಿ ಪಿರ್ಯಾದುದಾರ ಮುಂಚಿನಿಂದಲೂ ತೆರಿಗೆ ವಂಚನೆ ಮಾಡುತ್ತಾ ಬಂದಿರುತ್ತಾನೆಂದು ಉತ್ತರಿಸಿರುತ್ತಾನೆ. ನಾನು ಪಿರ್ಯಾದಿಯ ಹೆಂಡತಿಗೆ ಸಾಲವನ್ನು ಕೇಳಿದ್ದು ಲೀಸ್ ಗೆ ಪಡೆದಿರುವ ಜಗದೀಶ್ ರವರು 4 ಲಕ್ಷ ರೂ. ಹಣವನ್ನು ಪಿರ್ಯಾದಿಯ ಹೆಂಡತಿಗೆ ಕೊಡುವ

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-10.pdf

ಬದಲು ನನ್ನ ಹೆಂಡತಿಯ ಖಾತೆಗೆ ವರ್ಗಾವಣೆ ಮಾಡಿರುತ್ತಾನೆಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಲೀಸ್ ಹಣ ಮತ್ತು ಸಾಲದ ಹಣವನ್ನು ಪಡೆದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಮೊಬೈಲ್ ನಲ್ಲಿ ರೆಕಾರ್ಡ್ ಆಗಿರುವ ವಾಯ್ಸ್ ಮೆಸೇಜ್ ಅನ್ನು ನ್ಯಾಯಾಲಯದಲ್ಲಿ ಪ್ಲೇ ಮಾಡಿದ್ದು ಸಾಕ್ಷಿ ಅದರಲ್ಲಿ ಮಾತನಾಡಿರುವ ಧ್ವನಿ ನನ್ನದೇ ಆಗಿರುತ್ತದೆ ಎಂದು ಹಾಗೂ ನಾನು ಪಿರ್ಯಾದುದಾರನ ಹೆಂಡತಿಯ ಜೊತೆ ಮಾತನಾಡುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಪಿರ್ಯಾದುದಾರನಿಂದ ಸಾಲದ ಹಣವನ್ನು ಪಡೆದಿದ್ದರೂ ಸಹ ಯಾವುದೇ ಹಣವನ್ನು ಪಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರ ಹಾಜರುಪಡಿಸಿದ ನನಗೆ ಸಂಬಂಧಿಸಿದ ಚೆಕ್ಕು 2 ಬಾರಿ ಅಮಾನ್ಯಗೊಂಡಿರುವ ಬಗ್ಗೆ ನನಗೆ ಮಾಹಿತಿ ಇದೆ ಆದರೆ ಸದರಿ ಚೆಕ್ಕನ್ನು ನಾನು ಪಿರ್ಯಾದುದಾರನಿಗೆ ಕೊಟ್ಟಿರುವುದಿಲ್ಲ. ನಾನು ಪಿರ್ಯಾದುದಾರನಿಂದ 1,05,31,530 ರೂ. ಹಣವನ್ನು ಪಡೆದಿರುವುದಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕಚೇರಿಯಲ್ಲಿ ವಕೀಲರ ಸಮಕ್ಷಮ ಪಿರ್ಯಾದುದಾರ ಮತ್ತು ನಮ್ಮ ವಕೀಲರ ಮಧ್ಯೆ ರಾಜಿ ಕುರಿತು ಮಾತುಕತೆಯಾಗಿರುವ voice recording ಅನ್ನು ಪ್ಲೈ ಮಾಡಿದ್ದು ಅದರಲ್ಲಿ ಇರುವ ಧ್ವನಿ ನನ್ನ ವಕೀಲರ ಮತ್ತು ಪಿರ್ಯಾದುದಾರನ ಧ್ವನಿಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

**ಮರುವಿಚಾರಣೆ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓದಿ ಹೇ.ಕೇ.ಸ.ಇ.)

20 ನೇ ಅ.ಮು.ನ್ಯಾ.ದಂ.
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-10.pdf

www.ecourtsindia.com

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.eco

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-10.pdf